ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 640 (771)
ಸದಸ್ಯರ ಹೆಸರು	: ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ
ಉತ್ತರಿಸಬೇಕಾದ ದಿನಾಂಕ	: 05.03.2021
ಉತ್ತರಿಸುವ ಸಚಿವರು	: ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಸಂಚಾರ ಮಾಡುವ ದೊಡ್ಡ ವಾಹನಗಳಿಗೆ ಅಳವಡಿಸುತ್ತಿರುವ ಹೆಡ್ ಲೈಟ್‌ಗಳಿಂದ ಆಗುತ್ತಿರುವ ಅಪಘಾತಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಇದಕ್ಕೆ ತೆಗೆದುಕೊಂಡ ಕ್ರಮಗಳೇನು;</td><td>ಹೌದು.
ರಾಜ್ಯದಲ್ಲಿ ಸಂಚಾರ ಮಾಡುವ ಭಾರಿ ವಾಹನಗಳಿಗೆ ಅಳವಡಿಸಿರುವ ಹೆಡ್ ಲೈಟ್‌ಗಳಿಂದ ಯಾವುದೇ ಅಪಘಾತಗಳು ಸಂಭವಿಸಿರುವುದು ವರದಿಯಾಗಿರುವುದಿಲ್ಲ ಹಾಗೂ ಅತಿ ಹೆಚ್ಚಿನ ಪ್ರಖರವಾದ ಹೆಡ್ ಲೈಟ್‌ಗಳನ್ನು ಬಳಸಿ ಸಂಚರಿಸುವ ವಾಹನಗಳ ವಿರುದ್ಧ ದಾಖಲಿಸಿದ ಪ್ರಕರಣಗಳ ವಿವರಗಳು ಈ ಕೆಳಕಂಡಂತಿರುತ್ತವೆ.
<table><tr><th>ವರ್ಷ</th><th>ದಾಖಲಿಸಿದ ಪ್ರಕರಣಗಳು</th></tr><tr><td>2018</td><td>13683</td></tr><tr><td>2019</td><td>7414</td></tr><tr><td>2020</td><td>1071</td></tr><tr><td>2021 (ಜನವರಿ)</td><td>78</td></tr><tr><td>ಒಟ್ಟು</td><td>**22246**</td></tr></table></td></tr>
<tr><td>(ಆ)</td><td>ವಾಹನಗಳಲ್ಲಿ ಪ್ರಕರವಾದ ಎಲ್.ಇ.ಡಿ., ದೀಪಗಳನ್ನು ಅಳವಡಿಸಲು ಅವಕಾಶ ವಿದೆಯೇ; ಇದ್ದಲ್ಲಿ ಅದರ ಮಾಹಿತಿಯನ್ನು ನೀಡುವುದು; ಇಲ್ಲವಾದಲ್ಲಿ, ಇಂತಹ ವಾಹನಗಳ ವಿರುದ್ಧದ ಕ್ರಮಗಳ ವಿವರ ನೀಡುವುದು;</td><td>ವಾಹನಗಳಲ್ಲಿ ಪ್ರಖರವಾದ ದೀಪವನ್ನು ಅಳವಡಿಸುವ ಕುರಿತು ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳಲ್ಲಿ ಸ್ಪಷ್ಟತೆಯಿಲ್ಲದೇ ಇರುವುದರಿಂದ ಹೆಡ್‌ಲೈಟ್‌ಗಾಗಿ ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸಿರುವುದಿಲ್ಲ.
ಪ್ರಖರವಾದ ಮತ್ತು ಕಣ್ಣಿಗೆ ಚುಚ್ಚುವ ಎಲ್.ಇ.ಡಿ ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವ ಕುರಿತು ಸ್ಪಷ್ಟವಾದ ಮಾಹಿತಿ ಇರುವುದಿಲ್ಲ. ಆದಾಗ್ಯೂ ಪ್ರಖರವಾದ ದೀಪಗಳನ್ನು ಅಳವಡಿಸಿರುವುದು ಕಂಡು ಬಂದಲ್ಲಿ, ಅಂತಹ ವಾಹನಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು.</td></tr>
<tr><td>(ಇ)</td><td>ಈ ಹಿಂದೆ ಭಾರಿ ವಾಹನಗಳಲ್ಲಿ ದೀಪಗಳ ಪ್ರಕರತೆಯನ್ನು ತಗ್ಗಿಸಲು ವಾಹನಗಳ ಹೆಡ್ ಲೈಟ್‌ನ ಮೇಲ್ಭಾಗಕ್ಕೆ ಕಪ್ಪು ಬಣ್ಣವನ್ನು ಬಳಿಯುತ್ತಿದ್ದಂತೆ ಮಾಡಲು ಸರ್ಕಾರದ ಚಿಂತನೆಗಳೇನು;(ವಿವರ ನೀಡುವುದು)</td><td>ಭಾರಿ ವಾಹನಗಳಲ್ಲಿ ದೀಪಗಳ ಪ್ರಖರತೆಯನ್ನು ತಗ್ಗಿಸಲು ವಾಹನಗಳ ಹೆಡ್‌ಲೈಟ್‌ನ ಮೇಲ್ಭಾಗಕ್ಕೆ ಕಪ್ಪು ಬಣ್ಣ ಬಳಿಯುವುದು ಮೋಟಾರು ವಾಹನ ಕಾಯ್ದೆ ಅಥವಾ ನಿಯಮಗಳಲ್ಲಿ ಅವಕಾಶ ಇಲ್ಲದೇ ಇರುವುದರಿಂದ ವಾಹನಗಳ ಹೆಡ್‌ಲೈಟ್‌ಗಳ ಮೇಲ್ಭಾಗದಲ್ಲಿ ಕಪ್ಪು ಬಣ್ಣ ಬಳಿಯುವ ಕ್ರಮವನ್ನು ಕೈಬಿಡಲಾಗಿರುತ್ತದೆ.</td></tr>
</table>

<table>
<tr>
<td>(ಈ)</td>
<td>ಪ್ರಕರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಮತ್ತು ಅಪಘಾತಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದ ಕಠಿಣ ಕ್ರಮಗಳೇನು? (ವಿವರ ನೀಡುವುದು)</td>
<td>ಪ್ರಖರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲಾಗುತ್ತಿದ್ದು, ಸದರಿ ವಾಹನಗಳ ವಿರುದ್ಧ ದಾಖಲಿಸಿದ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.
<table>
<tr><th rowspan="2">ವರ್ಷ</th><th colspan="2">ದಾಖಲಿಸಿದ ಪ್ರಕರಣಗಳು</th></tr>
<tr><th>ಬಾರಿ ವಾಹನಗಳು</th><th>ಲಘು ವಾಹನಗಳು</th></tr>
<tr><td>2018</td><td>4909</td><td>7343</td></tr>
<tr><td>2019</td><td>1941</td><td>2287</td></tr>
<tr><td>2020</td><td>659</td><td>1698</td></tr>
<tr><td>2021
(ಜನವರಿ)</td><td>74</td><td>173</td></tr>
<tr><td>ಒಟ್ಟು</td><td>7583</td><td>11501</td></tr>
</table>
</td>
</tr>
</table>

ಹೆಚ್‌ಡಿ 171 ಎಸ್‌ಎಸ್‌ಟಿ 2021

(ಬಸವರಾಜ ಬೊಮ್ಮಾಯಿ)
ಗೃಹ ಮತ್ತು ಕಾನೂನು,
ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನಾ ಸಚಿವರು